ಸಚಿವರು):

ಅ) 2291.33 ಲಕ್ಷ ರೂ.ಗಳು

ಆ) 230.002 ಲಕ್ಷ ರೂ.ಗಳನ್ನು ಪ್ರಸಕ್ತ ಸಾಲಿನ ಜನವರಿ ಮಾಹೆಯ ಅಂತ್ಯದವರೆಗೆ ಖರ್ಚು ಮಾಡಲಾಗಿದೆ.

ಇ) 138.237 ಲಕ್ಷ ರೂ.ಗಳು

ಈ) 66.147 ಲಕ್ಷ ರೂ.ಗಳು (ಜನವರಿ ಮಾಹೆಯ ಅಂತ್ಯದವರೆಗೆ)

ಹಾಸನ ಜಿಲ್ಲೆಗೆ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ

169 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ಜಿಲ್ಲೆಗೆ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ 1990-91ನೇ ಸಾಲಿಗೆ ಒದಗಿಸಿದ ಹಣವೆಷ್ಟು?*

ಆ) *ಇಲ್ಲಿಯವರೆಗೆ ಖರ್ಚಾಗಿರುವ ಒಟ್ಟು ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)*

ಇ) *ಸದರಿ ಯೋಜನೆಯಲ್ಲಿ ಹಣದ ದುರುಪಯೋಗವಾಗಿದ್ದ ಬಗ್ಗೆ ಸಿಓಡಿ ತನಿಖೆಯು ಈಗ ಯಾವ ಹಂತದಲ್ಲಿದೆ?*

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 81.860 ಲಕ್ಷ ರೂ.ಗಳು

ಆ) ತಾಲ್ಲೂಕುವಾರು ಖರ್ಚಿನ ವಿವರ ಈ ಕೆಳಕಂಡಂತಿದೆ

1. ಹಾಸನ-10.622 ಲಕ್ಷ ರೂ.ಗಳು
2. ಆಲೂರು-5.551 ಲಕ್ಷ ರೂ.ಗಳು
3. ಬೇಲೂರು-10.653 ಲಕ್ಷ ರೂ.ಗಳು
4. ಸಕಲೇಶಪುರ-19.751 ಲಕ್ಷ ರೂ.ಗಳು

ಒಟ್ಟು46,577 ಲಕ್ಷ ರೂ.ಗಳು.

ಇ) ತನಿಖೆಯು ಅಂತಿಮ ಘಟ್ಟದಲ್ಲಿದೆ.

ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವುದು

174 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡದಲ್ಲಿ ಜಿಲ್ಲೆಯಲ್ಲಿ ಕಳೆದ 20-25 ವರ್ಷಗಳಿಂದ ಕಡು ಬಡವರು, ಹಿಂದುಳಿದವರು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನರು ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡು ಸಾಗುವಳಿ ಮಾಡುತ್ತಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?*

ಆ) *ಹಾಗಿದ್ದಲ್ಲಿ, ಸರ್ಕಾರ ಈ ಭೂಮಿಯನ್ನು ಸಕ್ರಮಗೊಳಿಸಿ ಈಗ ಅತಿಕ್ರಮಣ ಮಾಡುತ್ತಿರುವವರ ಹೆಸರಿಗೆ ನೀಡಲು ಕ್ರಮ ಕೈಗೊಳ್ಳುತ್ತದೆಯೇ?*

ಇ) *ಇಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಇ.ಟಿ. ಶಂಬುಸಾಫ್ (ಅರಣ್ಯ ರಾಜ್ಯ ಸಚಿವರು) :